ಕಥೆ ಮತ್ತು ಕವಿತೆಗಳ ಮೂಲಕ ಸಹೃದಯರಿಗೆ ಪರಿಚಿತರಾದ ಮೀನಾ ಮೈಸೂರು 'ವಾರ್ತಾ ಮತ್ತು ಪ್ರಸಾರ ಸಚಿವಾಲಯ'ದಲ್ಲಿ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿದವರು. ಸಾಹಿತ್ಯದೊಂದಿಗೆ ರಂಗಭೂಮಿಯಲ್ಲೂ ಆಸಕ್ತರು. ಮಕ್ಕಳಿಗಾಗಿಯೂ ಸಾಹಿತ್ಯ ರಚಿಸಿದ್ದಾರೆ. 'ಅಮೃತದೆಡೆಗೆ' (ಕಥಾ ಸಂಕಲನ), 'ಎತ್ತಣಿದೆಂತ್ತ' (ಪ್ರವಾಸ ಕಥನ), 'ಉಯ್ಯಾಲೆಯಲ್ಲಿ ಹಸು' (ಅನುವಾದಿತ ಮಕ್ಕಳ ಕತೆ) ಅವರಪ್ರಮುಖಕೃತಿಗಳು

ಕೊಟ್ಟು ಕಷ್ಟ ಅನುಭವಿಸಿದೆ ನೋಡು'.

'ನಂಗೂ ಸಂತೋಸ ಆಯ್ತಿತ್ತಲ್ಲ'.

'ಕರ್ಮ ಕರ್ಮ, ಈಗ ನೀನು ಜಾಗ ಖಾಲಿ ಮಾಡು' ಎಂದು ಅಸಹನೆ ತೋರಿದಳು.

ಸತ್ಯ ಯೋಳಿದ್ರೂ ಈಯಮ್ಮ ಗುರ್ ಅನ್ನದೆ ಅಂತ ಅನ್ಕೋತ ಕಾಲನ್ನು ಬಲವಂತವಾಗಿ ಕೆಳಗಿಟ್ಟೆ. ಎರಡು ನಿಮಿಷ ಕಾಲು ತೊಡೆ ನಡುಗ್ತಾ ಹೆಜ್ಜೆ ಇಡೋಕೆ ಆಗ್ಲಿಲ್ಲ. ಸೌಮ್ಯಕ್ಕ ಬಂದು ಕೈ ಹಿಡಿದು ನಡೆಸಿಕೊಂಡು ಬಂದು ಕಾರಲ್ಲಿ ತಮ್ಮನೆಗೆ ಕರಕೊಂಡು ಹೋಗಿ, ಸ್ನಾನ ಮಾಡೋಕೆ ಯೋಳಿ, ಹೊಸ ಬಟ್ಟೆ ಕೊಟ್ಟು, 'ಇಲ್ಲಿ ಆಗಿದ್ದೆಲ್ಲ ಮರೆತುಬಿಡು. ಯಾರಿಗೂ ಏನೂ ಹೇಳಬೇಡ. ನಾಳೆ ಮದುವೆ ಆಗೋ ನಿನ್ನ ಗಂಡಂಗೂ ಗೊತ್ತಾಗಬಾರದು, ಗೊತ್ತಾದರೆ ನಿನ್ನ ಬದುಕು ನರಕ ಮಾಡಿಬಿಡ್ತಾರೆ. ಹುಷಾರು, ಇಂಥ ಕೆಲಸ ಇನ್ನು ಮುಂದೆ ಮಾಡ್ಕೋಬೇಡ' ಅಂತ ಬುದ್ಧಿ ಮಾತ ಯೋಳಿದ್ರು.

ಆಮೇಲೆ ಯಾರೋ ಫೋನ್ ಮಾಡಿದರು. 'ಆಯ್ತು ಆಯ್ತು' ಎನ್ನುತ್ತಾ 'ಸೇವಂತಿ ರೆಡಿಯಾದ? ನಾನು ಹೇಳಿದ್ದೆಲ್ಲಾ ನೆನಪಿದೆಯಾ? ನಿನ್ನ ಮದುವೆ ಗುರುತಾದಾಗ ತಿಳಿಸು, ಪ್ರೊಫೆಸರ್ ಹತ್ತಿರ ಸ್ವಲ್ಪ ಕಾಸು ಕೊಡಿಸುವೆ' ಎನ್ನುತ್ತಾ ಕಾರ್ ಹತ್ತಿಸಿ ಬಸ್ ಸ್ಟ್ಯಾಂಡ್ ಬಳಿ ಬಂದರು. ಅಲ್ಲಿ ನಮ್ಮವ್ವ ಅಪ್ಪ ಎಲ್ಲಾ ಇದ್ದರು. ಯಾರೂ ಏನೂ ಮಾತಾಡಲಿಲ್ಲ. ಸೌಮ್ಯಕ್ಕ 'ಹುಷಾರು' ಅಂತ ಯೋಳಿ ಹೊಂಟೇ ಹೋದರು. ಅಪ್ಪ ಅವ್ವ ಬಾಯ್ಗೆ ಬೀಗ ಹಾಕೊಂಡವ್ರಂಗೆ ಒಂದೂ ಮಾತಾಡಲಿಲ್ಲ. ಬಸ್ ಹತ್ತಿ ನಮ್ಮ ಹಟ್ಟಿಗೆ ವಾಪಸ್ಸು ಬಂದ್ವಿ. ಒಂದೆರಡು ತಿಂಗಳೊಳಗೆ ಪಕ್ಕದ ಹಳ್ಳಿ ನಿಂಗನ ಜೊತೆ ಮದ್ವೆ ಮಾಡಿ ಬಿಟ್ರು. ಪ್ರೊಫೆಸರ್ ಮನೆಯ ಹತ್ತು ತಿಂಗಳ ಸಂತೋಸದ ದಿನಗಳು ಕನಸೋ ಅನ್ನುವಂಗೆ ಕಾಣೆ ಆಗೋಯ್ತು.

ಆಮೇಲೆ ಒಂದಪ ನಮ್ಮೂರಿಗೆ ಬಂದಿದ್ದ ಸೌಮ್ಯಕ್ಕ ಯೋಳಿದ್ದ ಕೇಳಿ ನಂಗೆ ಶಾನೆ ಬೇಜಾರಾಯ್ತು. ಆ ಪ್ರೊಫೆಸರ್ ಅಲ್ಲು ಅಟಾಕ್ ಆಗಿ ಹರನಪಾದ ಸೇರ್ಕೊಂಡರೆ, ಪಾರ್ವತಕ್ಕ ಬೆಂಕಿ ಸುರುಕೊಂಡು ಸತ್ತು ಹೋದ್ರಂತೆ. ಪಾಪ ಪಾರ್ವತಕ್ಕ ಯಾಕೆ ಹಂಗ ಮಾಡ್ಕೊಂಡರೊ? ಪ್ರೊಫೆಸರ್ ಮನೇಲಿ ಆಗ ನಾನಿದ್ನಲ್ಲ, ಅದೆಷ್ಟು ಪೆದ್ದಿ ಆಗಿದ್ದೆ ಅನ್ನಸ್ತದೆ ಈಗ. ಮಾವ ಅಳಿಯ ಇಬ್ಬರೂ ನನ್ನ ಜೊತೆ ಚಲ್ಲಾಟ ಆಡಿದ್ರಲ್ಲ? ಪಾರ್ವತಕ್ಕ ಮೂಗ್ ಬಸವನ ತರ ಬರೀ ಕೆಲಸ ಮಾಡ್ಕೊಂಡಿದ್ದರು. ಗಂಡ, ಮಗಳು ಅಳಿಯ ಯಾರೂ ಆಯಮ್ಮನ ಜೊತೆ ಕೂತು ಮಾತುಕತೆಯಾಡಿದ್ದೇ ನೋಡ್ಲಿಲ್ಲ. ಒಂದು ದಿನವೂ ಗೇಟ್ ಆಚೆ ಹೋಗ್ಲಿಲ್ಲ. ಅಕ್ಕಪಕ್ಕದ ಮನೆಯವರ ಕೂಡ ಮಾತಿಲ್ಲ. ಮಗಳಾ ಅವಳು, ಸದಾ ಅದು ಬೇಕು ಇದು ಬೇಕು ಅಂತ ಬಡಕೋತ ಇರೋಳು. ಅದೇನೋ ಒಬ್ಬ ಮಗ ಬೇರೆ ಇದ್ದಾನಂತೆ. ಒಂದು ದಿನವೂ ಅವನು ಆ ಮನೆಗೆ ಬರ್ಲಿಲ್ಲ. ಪ್ರೊಫೆಸರ್ ಜಗಳ ಆಡಿ ಮನೆಯಿಂದ ಓಡಿಸಿಬಿಟ್ರು ಅಂತ ಪಾರ್ವತಕ್ಕ ಹೇಳೋರು. ಮಗಳು ಬೇರೆ 'ಆಸ್ಪೀಲಿ ಪಾಲು ಕೊಡು' ಅಂತ ಹಾದಿ ಬೀದಿ ರಂಪ ಮಾಡಿ ಬಿಟ್ಲಂತೆ... ಅಯ್ಯೋ... ಪಾಪ ಪಾರ್ವತಕ್ಕ!

'ಓಹೋ ಸೇವಂತಿ, ಸಾಕು ಮಾಡು ನಿನ್ನ ಅನುಕಂಪ. ನಿನ್ನ ಕಥೆ ಸಾಕು ಮಾಡು. ಹಳೇದೆಲ್ಲ ಮರೆತು ಈಗ ಗಂಡ–ಮಕ್ಕಳ ಜತೆ ಸಂದಾಗಿ ಇದ್ದೀಯಲ್ಲ, ಹಂಗೆ ಇರೋಗು' – ಕಥೆಗಾರ ಎಚ್ಚರಿಸಿದ.

'ಅದು ಸರಿ ಕಥೆಗಾರಣ್ಣ, ಆ ಧಡಿಯ ಕೇಳಿದ ಪ್ರಸ್ನೆ ಅವ್ನೋ ಇವ್ನೋ ಅಂತ. ಅದಕ್ಕೆ ಉತ್ತರ ಸಿಗ್ನೆ ಇಲ್ವಲ್ಲ. ಕಥೆ ಬರ್ದ ನಿಂಗೂ ಗೊತ್ತಾಗ್ನಿವಾ? ನನ್ನ ಬಸಿರು ಯಾರ್ದು ಎಂಬೋ ಪ್ರಸ್ನೆ ಒಗಟಾಗಿ ಉಳೀಸಿ ಬಿಟ್ಟಲ್ಲಣ್ಣ!' ●